**ದಿನಾಂಕಃ 09.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

11. ನಿಪಿ-10 ರಲ್ಲಿ ನನ್ನ ತಂದೆಗೆ ಕಣ್ಣಿನ ಚಿಕಿತ್ಸೆ ಪಡೆದುಕೊಂಡಿರುವುದಾಗಿ ಹೇಳಿರುತ್ತೇನೆಂದರೆ ಸರಿ. ಈ ರೀತಿ ನನ್ನ ತಂದೆಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿರುವ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ಈ ರೀತಿ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸದೇ ಇದ್ದರೂ ಸಹಿತ ಕೊಟ್ಟಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಪ್ರಸ್ತುತ ದಾವಾ ಸ್ವತ್ತನ್ನು ಮುನಿವೆಂಕಟಮ್ಮ ಮತ್ತು ಅವರ ಮಕ್ಕಳು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಖರೀದಿ ಮಾಡಿದ ಮೂಲ ಪತ್ರವೂ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ನಾನು ಸದರಿ ಮೂಲ ದಾಖಲಾತಿಯನ್ನು ಹಾಜರು ಪಡಿಸದೇ ಇದ್ದರೂ ಸಹಿತ ಈ ಸಂಬಂಧ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ನಿಶಾನೆಗಳ ದಾಖಲಾತಿಯನ್ನು ನೋಡಿ ಮೂಲ ಪತ್ರವನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಮೂಲ ಪತ್ರವು ಸುಟ್ಟು ಹೋಗಿರುತ್ತದೆಂದು ನುಡಿಯುತ್ತಾರೆ. ಮೂಲಪತ್ರ ಸುಟ್ಟು ಹೋಗಿರುವ ಬಗ್ಗೆ ದಾವೆಯಲ್ಲಿ ಆಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿರುವುದಿಲ್ಲ ಎಂದರೆ ಸರಿ.

12. ನಿಪಿ-9 ರಲ್ಲಿ ಸ್ವತ್ತನ್ನು ಬರೆದುಕೊಟ್ಟವರ ಹೆಸರು ಕೇವಲ ವೆಂಕಟಮ್ಮ ಎಂದು ಇರುತ್ತದೆಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-5 ರಲ್ಲೂ ಸಹ ವೆಂಕಟಮ್ಮ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ಮತ್ತು 2 ರಲ್ಲಿ ದಾವಾ ಸ್ವತ್ತಿನ ಅಳತೆ ಅಥವಾ ವಿಸ್ತೀರ್ಣ ಬರೆದಿಲ್ಲ ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತನ್ನು ಪೂರ್ವ ಪಶ್ಚಿಮ 21 ಅಡಿ ಉತ್ತರ ದಕ್ಷಿಣ 75 ಅಡಿ ಎಂದು ಬರೆಸಿರುತ್ತಾರೆಂದರೆ ಸರಿ. ನಿಪಿ-3 ರಲ್ಲಿ ಮೊದಲಿಗೆ ಸ್ವತ್ತಿನ ವಿಸ್ತೀರ್ಣ 40 x 19 ಎಂದು ತೋರಿಸಿದ್ದು ನಂತರ ಅದನ್ನು ರೌಂಡ್ ಮಾಡಿ 40x 20 ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಆದ್ದರಿಂದ ನಾವು ತೋರಿಸಿರುವ ದಾವಾ ಸ್ವತ್ತಿನ ವಿಸ್ತೀರ್ಣಕ್ಕೂ ನಿಪಿ-3 ರಲ್ಲಿರುವ ವಿಸ್ತೀರ್ಣಕ್ಕೂ ವ್ಯತ್ಯಾಸವಿದೆ

ಎಂದರೆ ಸರಿ. ಅದೇ ರೀತಿ ನಿಪಿ-4 ರಲ್ಲಿ ಊರಿನ ಹೆಸರನ್ನು ಒಡೆದು ಹಾಕಿ ಅಲ್ಲಿ ಕಲ್ಲಹಳ್ಳಿ ಎಂದು ನಮೂದು ಮಾಡಲಾಗಿರುತ್ತದೆಂದರೆ ಹೌದು.

13. ನಿಪಿ-4 ಬೇರೆ ಯಾರಿಗೋ ಸೇರಿದ ದಾಖಲೆಯಾಗಿದ್ದು ಅದನ್ನು ನಾನು ಮತ್ತು ನನ್ನ ತಂದೆ ಸೇರಿಕೊಂಡು ದಾವೆಗೆ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿಪಿ-5 ಇಸಿಯನ್ನು ಹಾಜರು ಪಡಿಸಿದ್ದು ಅದು ದಿಃ01.04.1971 ರಿಂದ 05.11.2000 ನೇ ಇಸವಿಯವರೆಗೂ ಆಗಿರುತ್ತದೆಂದರೆ ಸರಿ. 1971 ರ ಪೂರ್ವಕ್ಕೆ ಸಂಬಂಧಿಸಿದಂತೆ ಇಸಿ ಹಾಜರು ಪಡಿಸಲು ಆಡಚಣೆ ಇದೆಯಾ ಎಂದರೆ ಸಾಕ್ಷಿಯು ನನ್ನ ತಂದೆ ಖರೀದಿ ಮಾಡಿದ ನಂತರ ಇರುವ ಇಸಿಯನ್ನು ಹಾಜರು ಪಡಿಸಿರುತ್ತೇನೆಂದು ನುಡಿಯುತ್ತಾರೆ.

14. ಪ್ರಸ್ತುತ ದಾವಾ ಸ್ವತ್ತು ವೆಂಕಟಮ್ಮ ರವರಿಗೆ ಸೇರಿತ್ತು ಎಂಬುದಾಗಿ ತೋರಿಸಲು ಯಾವ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ-6 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಯಾರು ಮಾಡಿರುತ್ತಾರೆ. ಸದರಿ ನಿಪಿ-6 ರಲ್ಲಿ ಪೂರ್ವ ಪಶ್ಚಿಮ 21 ಅಡಿ ಉತ್ತರ ದಕ್ಷಿಣ 75 ಅಡಿ ಎಂದು ನಮೂದು ಮಾಡಲಾಗಿರುತ್ತದೆಂದರೆ ಸರಿ. ನಿಪಿ-8 ರಲ್ಲಿ ಚಕ್ಕುಬಂದಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಕೇವಲ ಖಾನೇಷುಮಾರಿ ನಂಬರ್ ಇರುತ್ತದೆಂದು ನುಡಿಯುತ್ತಾರೆ. ಸದರಿ ನಿಪಿ-8 ರಲ್ಲಿ ದಿನಾಂಕ ತಿದ್ದುಪಡಿಯಾಗಿರುತ್ತದೆಂದರೆ ಸರಿ. ದಾವಾ ಆಸ್ತಿಯು ಮೂಲತಃ ವೆಂಕಟಾಬೋವಿ ಉಃವರಚಿಕ್ಕಣ್ಣ ರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಅದು ಸದರಿಯವರ ಸ್ವಯಾರ್ಜಿತ ಸ್ವತ್ತು ಎಂದರೆ ಸುಳ್ಳು. ಸದರಿ ಆಸ್ತಿಯನ್ನು ಅವರು ದಿಃ19.03.1937 ರಲ್ಲಿ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವೆಂಕಟಬೋವಿ ಉಃ ವರಚಿಕ್ಕಣ್ಣ ರವರ ಮಗ ಕರುಡಾಬೋವಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರುಡಾಬೋವಿ ರವರ ವಾರಸುದಾರರೇ ಪ್ರತಿವಾದಿ ಎಂದರೆ ಸರಿ .

15. ದಾವಾ ಸ್ವತ್ತು ಕರುಡಾಬೋವಿ ರವರಿಗೆ ಅವರ ತಂದೆಯ ಕಡೆಯಿಂದ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಖಾತೆ ಕರುಡಾಬೋವಿರವರ ಹೆಸರಿನಲ್ಲಿದ್ದ ಕಾರಣ ಅವರು ನನ್ನ ತಂದೆಯ ವಿರುದ್ದ ಓ ಎಸ್ 210/2000 ರಂತೆ ದಾವೆ ಹಾಕಿರುತ್ತಾರೆಂದರೆ

ಸರಿ. ನನ್ನ ತಂದೆ ಹಾಕಿದ್ದ ಓ ಎಸ್ 311/1997 ಇದು ಹಾಗಾ ಮಿಸ್ 1/1999 ಇದೇ ದಾವೆ ಸಂಬಂದಿಸಿದ ಪ್ರಕರಣಗಳು ಎಂದರೆ ಸರಿ. Ex.19/2011 ಇದರಲ್ಲಿರುವ ಸ್ವತ್ತು ಹಾಗೂ ಪ್ರಸ್ತುತ ದಾವೆಯಲ್ಲಿರುವ ಸ್ವತ್ತು ಎಂದರೆ ಸರಿಯಲ್ಲ. ಕೇವಲ ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈಗಾಗಲೇ ಡಿಕ್ರಿಯಾಗಿರುವ ಸ್ವತ್ತಿನ ಸಂಬಂಧ ಅದು ಬೇರೆ ಸ್ವತ್ತು ಎಂದು ಹೇಳುತ್ತಾ ಪ್ರಸ್ತುತ ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ಅದರಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಡಿಕ್ರಿಯಾಗಿಲ್ಲ ಅದು ಬೇರೆ ಆಸ್ತಿ ಎ ಂದು ನುಡಿಯುತ್ತಾರೆ.

16. Ex. Petition ಸ್ವತ್ತಿನ ಚಕ್ಕುಬಂದಿ ಗೊತ್ತಿರುವುದಿಲ್ಲ. ನಾವು ದಾವಾ ಸ್ವತ್ತಿನಲ್ಲಿ ತೋರಿಸಿರುವ ಚಕ್ಕುಬಂದಿ ಆಧಾರದ ಮೇರೆಗೆ ಅದು ಬೇರೆ ಎಂದು ಹೇಳುತ್ತಿದ್ದೇನೆ. ನನ್ನ ತಂದೆ ಸಾಕ್ಷ್ಯವನ್ನು ನುಡಿದರೆ ಸತ್ಯಾಂಶ ಹೊರಬರುತ್ತದೆಂಬ ಕಾರಣಕ್ಕೆ ನಾನು ಪ್ರತಿನಿಧಿಸುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಗೂ ನನ್ನ ತಂದೆ ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟ ಕಾರಣ ಅವರು ex. Petition ನ್ನು ನಮ್ಮ ವಿರುದ್ದ ಹಾಕಿರುತ್ತಾರೆಂದರೆ ಸುಳ್ಳು. ನಾನು ನನ್ನ ಸ್ವಂತ ಪತ್ರಿಕೆಯಾದ ಆದಿಶೇಷ ಪತ್ರಿಕೆ ಇದರ ಸಂಪಾದಕನಾಗಿರುತ್ತೇನೆ. ನನ್ನ ಮೇಲೆ ನಾನು ನಕಲಿ ಪತ್ರಕರ್ತ ಎಂದು ಪೋಲೀಸರು ಪ್ರಕರಣ ದಾಖಲಿಸಿದ್ದರು ಎಂದರೆ ಹೌದು. ಅದರಂತೆ ನನ್ನ ವಿರುದ್ದ ನಾನು ನಕಲಿ ಪತ್ರಕರ್ತ ಎಂದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಣೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ವಜಾ ಆಗಿದೆ ಎಂದು ನುಡಿಯುತ್ತಾರೆ.

17. ಈಗಾಗಲೇ ದಾವಾ ಆಸ್ತಿಯ ಸಂಬಂಧ ಪ್ರತಿವಾದಿಗಳ ಪರ ಡಿಕ್ರಿಯಾಗಿದ್ದರೂ ಸಹಿತ ಅದನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆಯ ಮೂಲಕ ನಾನು ಪ್ರತ್ಯೇಕ ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**